# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಂಖ್ಯೆ.23, ನಾಗವಾರ ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯಲ್ಲಿ ದಿನಾಂಕ: 17-05-2021 ರಂದು ನಡೆದ ವಾರ್ಡ್ ಡಿಟರ್ ಕಮಿಟಿ ಸಭೆಯ ನಡವಳಿಗಳು**

**ಹಾಜರಿದ್ದ ಸದಸ್ಯರು,**

1. ಶ್ರೀ ವಿಜಯಕುಮಾರ್.ಟಿ.ಡಿ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಕೆ ಶ್ರೀಕಾಂತ್, ಸದಸ್ಯ ಕಾರ್ಯದರ್ಶಿಗಳು ಮತ್ತು ಸಂಚಾಲಕರು,
3. ಶ್ರೀ ಸಲೀಮ್ ಪಾಷಾ, ಸ್ಥಳೀಯರು/ಸದಸ್ಯರು,
4. ಶ್ರೀ ಮೊಹಮ್ಮದ್ ದಾನಿಶ್, ಸ್ಥಳೀಯರು/ಸದಸ್ಯರು,
5. ಶ್ರೀ ಶಿವಕುಮಾರ್, ಸ್ಥಳೀಯರು/ಸದಸ್ಯರು,
6. ಶ್ರೀ ಹುಮಾಯೂನ್ ಶರೀಫ್, ಸ್ಥಳೀಯರು/ಸದಸ್ಯರು,
7. ಶ್ರೀ ಜಮೀಲ್ ಭೇಗ್, ಸ್ಥಳೀಯರು/ಸದಸ್ಯರು,

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಎ ರಾಯಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
2. ಶ್ರೀ ಸಿ.ಎಂ ವೆಂಕಟೇಶ್, ತೋಟಗಾರಿಕಾ ಇಲಾಖೆ

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಸಭೆಯಲ್ಲಿ ಮಂಡಿಸಲಾದ ಉದ್ದೇಶಗಳು,**

1. ನಾಗವಾರ, ವಾರ್ಡ್ ನಂ.23 ರಲ್ಲಿ ಕೋವಿಡ್-19ರ ರೋಗಿಗಳಿಗಾಗಿ ಟ್ರಯೇಜ್ (Triage) ಸೆಂಟರ್ ಅನ್ನು ಸ್ಥಾಪಿಸುವುದು.
2. ಮೇಲೆ ತಿಳಿಸಿರುವ ಉದ್ದೇಶಕ್ಕಾಗಿ ಕೋವಿಡ್ ಕೇರ್ ಸೆಂಟರ್ ಅನ್ನು ಸ್ಥಾಪಿಸುವುದು.
3. ಈ ಎರಡು ಉದ್ದೇಶಗಳಿಗಾಗಿ ಸ್ಥಳ ಪರೀಕ್ಷೆ ನಡೆಸಿ, ಕಟ್ಟಡವನ್ನು ಗುರುತಿಸುವುದು.
4. ಮೇಲಿನ ಉದ್ದೇಶಕ್ಕಾಗಿ 40 ರಿಂದ 50 ಜನ ಸ್ವಯಂ ಸೇವಕರು, ಡಾಟಾ ಎಂಟ್ರಿ ಮಾಡುವವರು, ದಾದಿಯರು ಮತ್ತು ಶುಶ್ರೂಶಕರನ್ನು ನೇಮಿಸುವುದು.

**ಸಭೆಯ ನಡವಳಿಗಳು**

1) **ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ** ರವರು ಮಾತನಾಡಿ,

   - ವಾರ್ಡ್‌ನ ಸಾರ್ವಜನಿಕರ ಹಿತದೃಷ್ಟಿಯಿಂದ ಗೋವಿಂದಪುರ ಸರ್ಕಾರಿ ಶಾಲೆಯಲ್ಲಿ ಟ್ರೈಯೇಜ್ ಸೆಂಟರ್‌ಗಾಗಿ ಸದರಿ ಕಟ್ಟಡವನ್ನು ಅನುಮೋದಿಸಲು ಆರೋಗ್ಯ ವೈಧ್ಯಾಧಿಕಾರಿರವರನ್ನು ಪರಿವೀಕ್ಷಣೆ ಮಾಡಿಸಲು, ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

**ಪು.ತಿ.ನೋ...**

- ಸಾರ್ವಜನಿಕರು ಕೋವಿಡ್ ತಪಾಸಣೆ ಮಾಡಿಸಿ, ಸೋಂಕು ದೃಢಪಟ್ಟ ಸಂದರ್ಭದಲ್ಲಿ ಸೋ... ಪ್ರಮಾಣವನ್ನು ಆಧರಿಸಿ, ಸೋಂಕಿತರಿಗೆ ಅಗತ್ಯವೆನಿಸುವ ಚಿಕಿತ್ಸೆ ನೀಡಲು ಕ್ರಮ ವಹಿಸಿ... ಡಾ॥ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಕಾಲೇಜಿನಲ್ಲಿ ಟ್ರೈಯೇಜ್ ಸೆಂಟರ್ ಅನ್ನು ತೆರಯಲಾಗಿದ್ದು... ಸಾರ್ವಜನಿಕರು ಇದರ ಸದುಪಯೋಗ ಪಡೆಯಲು ಸಭೆಗೆ ತಿಳಿಸಿದರು.
- ಲಘು ಕೋವಿಡ್ ಸೋಂಕಿತರು ಹೋಮ್ ಐಸೋಲೇಷನ್ ನಲ್ಲಿರಬೇಕಾಗಿದ್ದು, ಮನೆಯಲ್ಲಿ ಕೇವಲ ಒಂದು ಶೌಚಾಲಯವಿರುವ ಸೋಂಕಿತರನ್ನು ಹೋಮ್ ಐಸೋಲೇಷನ್ ಮಾಡಲು ವಾರ್ಡ್ ವ್ಯಾಪ್ತಿಯಲ್ಲಿರುವ ಉರ್ದು ಶಾಲೆಯಲ್ಲಿ ವ್ಯವಸ್ಥೆ ಕಲ್ಪಿಸಲು ಹಾಗೂ ಆರೋಗ್ಯ ವೈಧ್ಯಾಧಿಕಾರಿ ರವರಿಗೆ ಸದರಿ ಕಟ್ಟಡ ಪರಿವೀಕ್ಷಣೆ ಮಾಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚಾಗುತ್ತಿರುವ ಸೋಂಕನ್ನು ತಡೆಗಟ್ಟಲು ದಿನಾಂಕ: 07-05-2021 ರಂದು ನಡೆದ ಸಭೆಯಲ್ಲಿ ಪ್ರತಿ ವಾರ್ಡ್‌ನಲ್ಲಿ ಕೋವಿಡ್ ಕೇರ್ ಸೆಂಟರ್ ಹಾಗೂ Deter Committee ಸ್ಥಾಪಿಸಿ, ಸ್ವಯಂ ಸೇವಕರು ಹಾಗೂ ಅಧಿಕಾರಿ ನೌಕರರನ್ನು ಒಳಗೊಂಡ ಒಂದು ವಾಟ್ಸ್‌ಆಪ್ ಗ್ರೂಪ್ ಮಾಡಿ, ಕೋವಿಡ್‌ಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ಹಂಚಿಕೊಳ್ಳಲು ಸೂಚಿಸಿದರು.
- ಪ್ರಸ್ತುತ ರಾಜ್ಯದಲ್ಲಿ ಕೋವಿಡ್ ಲಾಕ್‌ಡೌನ್ ಚಾಲ್ತಿಯಲ್ಲಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರು ಸುಖಾ ಸುಮ್ಮನೆ ತಿರುಗಾಡುತ್ತಿರುವುದು ಕಂಡು ಬಂದಿದ್ದು, ಅಂತಹ ವಾಹನಗಳನ್ನು ಜಪ್ತಿ ಮಾಡಿ ಸೂಕ್ತ ದಂಡ ವಿಧಿಸಿ, ಸಾರ್ವಜನಿಕರಿಗೆ ಲಾಕ್‌ಡೌನ್ ಬಗ್ಗೆ ಪೊಲೀಸ್ ಇಲಾಖೆಯವರು ಈ ಬಗ್ಗೆ ಕಟ್ಟು ನಿಟ್ಟಿನ ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.
- ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಿಗೆ ಸೋಡಿಯಂ ಹೈಪೋಕ್ಲೋರೈಡ್ ದ್ರಾವಣವನ್ನು ಸಿಂಪಡಿಸಲು ಹಾಜರಿದ್ದು, ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸೂಚಿಸಲಾಯಿತು.
- ಮುಂದಿನ ವಾರ್ಡ್ ಸಭೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ-ಸರ್ವಜ್ಞನಗರ ವಿಭಾಗ ರವರು ಕಡ್ಡಾಯವಾಗಿ ಹಾಜರಿರಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ಸದರಿ ವಾರ್ಡಿನ ಎಲ್ಲಾ ವಾರ್ಡ್ ಕಮಿಟಿ ಸದಸ್ಯರ ಅಭಿಪ್ರಾಯದಂತೆ ಕರೋನಾ ಲಾಕ್‌ಡೌನ್‌ನಿಂದ ವಾರ್ಡ್ ಪ್ರದೇಶದಲ್ಲಿ ಕೆಲಸ ಕಾರ್ಯಗಳಿಲ್ಲದೆ ದಿನ ನಿತ್ಯ ಆಹಾರ ಸಾಮಾಗ್ರಿಗಳು ಹಾಗೂ ಇತರೆ ಅವಶ್ಯಕ ವಸ್ತುಗಳಿಗಾಗಿ ಸ್ಥಳೀಯ ಸಾರ್ವಜನಿಕರು ಪರದಾಡುವಂತಾಗಿದ್ದು, ಬಡವರು, ಕಡುಬಡವರು, ಕೂಲಿ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರಿಗೆ ದಿನಸಿ/ ಆಹಾರ ಸಾಮಾಗ್ರಿಗಳನ್ನು ನೀಡಲು ಪ್ರತಿ ವಾರ್ಡ್‌ಗೆ ರೂ.20.00 ಲಕ್ಷಗಳನ್ನು ಒದಗಿಸಿದ್ದು, ನಾಗವಾರ ವಾರ್ಡಿನಲ್ಲಿ ಇದುವರೆವಿಗೂ ಯಾವುದೇ ಆಹಾರ ಸಾಮಗ್ರಿಗಳನ್ನು ವಿತರಣೆ ಮಾಡಿರುವುದಿಲ್ಲ, ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರತಿ ವಾರ್ಡ್‌ಗೆ ಮೀಸಲು ಇಟ್ಟಿರುವ ರೂ.20.00 ಲಕ್ಷಗಳ ಅನುದಾನವನ್ನು ಬಳಸಿಕೊಳ್ಳಲು ಸಭೆಯಲ್ಲಿ ಪ್ರಸ್ತಾಪಿಸಿದರು ಹಾಗೂ ಸದರಿ ವಿಷಯವನ್ನು ಸ್ಥಳೀಯ ಹೆಚ್.ಬಿ.ಆರ್ ಲೇಔಟ್ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಲಾಯಿತು.
- ಮುಂದಿನ ಸಭೆ ಕರೆಯುವ ಬಗ್ಗೆ ಪ್ರಸ್ತಾಸಿದಾಗ ಹಾಜರಿದ್ದ ಸದಸ್ಯರು ಟ್ರಯಾಜ್ ಕೇಂದ್ರ ಸ್ಥಾಪಿಸುವ ಸಂದರ್ಭದಲ್ಲಿ ಮುಂದಿನ ದಿನಾಂಕ ಪ್ರಕಟಿಸಲು ಸಲಹೆ ನೀಡಿರುತ್ತಾರೆ.

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ವಿಷಯಗಳ ಬಗ್ಗೆ ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.23, ನಾಗವಾರ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.23, ನಾಗವಾರ

**ಪ್ರತಿಯನ್ನು**

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಬಿ.ಆರ್ ಉಪ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.
7) ಪೊಲೀಸ್ ಇನ್ಸ್‌ಪೆಕ್ಟರ್, ಗೋವಿಂದ್‌ಪುರ ಪೊಲೀಸ್ ಠಾಣೆ ರವರ ಮಾಹಿತಿಗಾಗಿ ಸಲ್ಲಿಸಿದೆ.